 ನಾಂದಿಪದ

# ಬೆಳ್ಳಿತೆರೆಯ ಹೊಸ ಮಿಂಚುಗಳು

ಇತ್ತೀಚೆಗೆ ಕನ್ನಡದಲ್ಲಿ ಹೊಸ ಪ್ರಯೋಗ, ಪ್ರಯತ್ನಗಳ ಸಿನಿಮಾಗಳು ಬರುತ್ತಿವೆ. 'ಹರಿವು', 'ತಿಥಿ', 'ಯು ಟರ್ನ್', 'ನಾನು ಅವನಲ್ಲ, ಅವಳು', 'ಗೋಧಿ ಬಣ್ಣ ಸಾಧಾರಣ ಮೈಕಟ್ಟು', 'ಕಿರಗೂರಿನ ಗಯ್ಯಾಳಿಗಳು', ಮೊನ್ನೆ ಬಂದ 'ರಾಮಾ ರಾಮಾ ರೇ...' ತರಹದ ಚಿತ್ರಗಳು ಯುವನಿರ್ದೇಶಕರ ಸಿನಿಮಾದ ಕುರಿತ ದಾಹ, ಮೋಹಗಳನ್ನು ಸೂಚಿಸುವಂತಿದ್ದವು. ಕತೆಯ ಆಯ್ಕೆ, ಅದರ ನಿರ್ವಹಣೆಯಲ್ಲಿ ಅವರದೇ ಶೈಲಿ ಇತ್ತು. ಹೊಸ ಪ್ರಯೋಗಗಳನ್ನು ಪ್ರೇಕ್ಷಕರು ನೋಡುವುದಿಲ್ಲ ಎಂಬುದನ್ನು 'ತಿಥಿ' ತರಹದ ಸಿನಿಮಾ ಸುಳ್ಳು ಮಾಡಿತು. ಪ್ರಕಾರ ಯಾವುದೇ ಇರಲಿ—ಅದು ಬದುಕಿಗೆ ಹತ್ತಿರವಾದರೆ, ಜೀವಕ್ಕೆ ಬೇಕೆನ್ನಿಸುವ ಅಂಶ ಇದ್ದರೆ ಜನರು ಅವನ್ನು ನೋಡದೇ ಇರುವುದಿಲ್ಲ ಎಂಬುದನ್ನು ಈ ಸಿನಿಮಾಗಳು ನಿಜಗೊಳಿಸಿದವು. ಅದೇ ಹೊತ್ತಿಗೆ ಜಗಮಗಿಸುವ ತಾರೆಗಳಿದ್ದ ಚಿತ್ರಗಳು ಕಣ್ಮರೆಯಾದವು. ವ್ಯಾಪಾರ, ಕಲೆ ಎರಡೂ ಆಗಿರುವ ಸಿನಿಮಾದ ಮಾಂತ್ರಿಕತೆ ಎಲ್ಲಿದೆ ಎಂಬುದು ಈಗಾಗಲೇ ಈ ರಂಗದಲ್ಲಿ ಪಳಗಿರುವ ವೃತ್ತಿವಂತರಿಗೆ ಇನ್ನೂ ಅರ್ಥವಾದಂತಿಲ್ಲ; ಅದು ಆ ಕಲೆಯ ಕಡೆಗಿನ ಬದ್ಧತೆಯನ್ನು, ನಿಷ್ಠುರ ವೃತ್ತಿಪರತೆಯನ್ನು ಕೇಳುತ್ತದೆ ಎಂಬುದನ್ನು ಮೇಲಿನ ಸಿನಿಮಾಗಳನ್ನು ಮಾಡಿದವರು ತೋರಿದ್ದಾರೆ.

ಜನರು ನೋಡದಿದ್ದರೂ ತೊಂದರೆ ಇಲ್ಲ, ಪ್ರಶಸ್ತಿ ಬಂದರೆ ಸಾಕು ಎಂದುಕೊಂಡೇ ನಮ್ಮ ಬಹುಪಾಲು ನಿರ್ದೇಶಕರು ಕಲಾತ್ಮಕ ಸಿನಿಮಾಗಳನ್ನು ಮಾಡುತ್ತ ಬಂದಿದ್ದಾರೆ. ಯಾವುದೇ ಕಲೆಯಾದರೂ ಅದು ಜನರನ್ನು ರಂಜಿಸಲೂ ಬೇಕು, ಅನುಭವವನ್ನೂ ಹೇಳಬೇಕು ಎಂಬುದನ್ನು ಮರೆತು ಮಾಡಿದ ಸಿನಿಮಾಗಳವು. ಸಾಹಿತ್ಯವನ್ನು ಓದುವಾಗಲೂ ಓದುಗ ನಿರೀಕ್ಷಿಸುವುದು ಘನಗಂಭೀರ ವಾಕ್ಯಗಳ ಸರಣಿಯನ್ನಲ್ಲ; ತನ್ನನ್ನು ಮುದಗೊಳಿಸುವ, ತಮಾಷೆಯಿಂದ ಹಗುರಗೊಳಿಸುವ, ಎದೆ ಬೆಚ್ಚಗೆ ಮಾಡುವ ಮಾತುಗಳನ್ನು, ಸನ್ನಿವೇಶಗಳನ್ನು. ಪ್ರೇಕ್ಷಕರನ್ನು ಭಾವನೆಗಳಿಲ್ಲದ ಜಡವಸ್ತುಗಳೆಂದು ತಿಳಿದು ತಮ್ಮ ವಿಷಯಾಧಾರಿತ ಸಿನಿಮಾಗಳನ್ನು ಅನೇಕ ನಿರ್ದೇಶಕರು ಹೇರುತ್ತಲೇ ಬಂದಿದ್ದಾರೆ. ಈಗ ಹೊಸಬರು ತಮ್ಮದೇ ಮಾದರಿಯ, ದಾರಿಯ ಕತೆಗಳನ್ನು ಮಂಡಿಸಲು ಶುರು ಮಾಡಿದ್ದಾರೆ. ಕಲೆಗಾಗಿ ಕಲೆ ಎಂಬಂತೆ ಸಿನಿಮಾ ಮಾಡಿಕೊಂಡು ಬಂದ ನಿರ್ದೇಶಕರು ಸಹಜವಾಗಿ ಈ ಹೊಸಬರ ಪ್ರಭೆಯ ಮುಂದೆ ಮಂಕಾಗಿದ್ದಾರೆ. ಅವರು ಈ ತನಕ ಅನುಸರಿಸಿಕೊಂಡು ಬಂದ ಕತೆ ಹೇಳುವ ಸೂತ್ರಗಳು ಇವರ ಮುಂದೆ ಕೆಲಸ ಮಾಡುವಂತೆ ಕಾಣುತ್ತಿಲ್ಲ. ಮತ್ತು ಇವರೆಲ್ಲರಿಗಿಂತ ಭಿನ್ನವಾಗಿ ಕತೆ ಹೇಳಬೇಕಾದ ಸವಾಲು ಅವರ ಎದುರಿಗಿದೆ.

ಇವೆಲ್ಲದರಿಂದ ಪ್ರೇಕ್ಷಕರ ಮುಂದೆ ಈಗ ಹಲವು ಆಯ್ಕೆಗಳು ತೆರೆದುಕೊಂಡಿವೆ; ಕಲಾತ್ಮಕತೆಯ ಹೆಸರಿನಲ್ಲಿ ವಂಚಿಸುತ್ತ ಬಂದವರ ಮಿತಿಗಳು ಗೊತ್ತಾಗಿವೆ. ಬೌದ್ಧಿಕ ಭಾರಗಳನ್ನು ತುರುಕಿ ಮಾಡಿದ ಸಿನಿಮಾಗಳನ್ನು ಪ್ರಶಸ್ತಿ ಬಂದ ಬಳಿಕ ಮುಚ್ಚಿಟ್ಟು ಸುಮ್ಮನಿರುವ ನಿರ್ದೇಶಕರು ಇನ್ನು ಮುಂದೆ ಉಳಿಯುವಂತೆ ಕಾಣುತ್ತಿಲ್ಲ. ಈಗ ಬರುತ್ತಿರುವ ಹೊಸನೀರು ಉತ್ತಮ ಫಸಲಿಗೆ ಕಾರಣವಾಗಿದೆ; ಮಾತ್ರವಲ್ಲ, ಭಾಷೆಯೊಂದರ ಕ್ರಿಯಾಶೀಲತೆಯ ಗುರುತೂ ಆಗಿದೆ.



'ರಾಮಾ ರಾಮಾ ರೇ...' ಚಿತ್ರದ ದೃಶ್ಯ

**ಸಂದೀಪ ನಾಯಕ**